ಕರ್ನಾಟಕ ಸರ್ಕಾರ
Government of karnataka
ಡಿಎಸ್ಇಆರ್‌ಟಿ
DSERT
ರಾಜ್ಯ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ಇಲಾಖೆ
DEPARTMENT OF STATE EDUCATIONAL RESEARCH AND TRAINING
No 4, 100 FT RING ROAD, BANASHANKARI 3 RD STAGE BENGALURU - 560 085
Email: dpl.dsert-ka@nic.in Website: http://dsert.kar.nic.in
Phone - 080 26980100
Fax - 080 26422377

ಸಂಖ್ಯೆ: DSERT/EVG/ಪ.ಶೈ.ಕ್ಯಾ/07/2021/-22

ದಿನಾಂಕ: 30-07-2021

**:ಸುತ್ತೋಲೆ:**

ವಿಷಯ:- ಆಗಸ್ಟ್-2021 ರ ಮಾಹೆಯ ಪರ್ಯಾಯ ಶೈಕ್ಷಣಿಕ ಯೋಜನೆಯನ್ನು ಶಾಲೆಗಳಲ್ಲಿ ಕಲಿಕಾ ಬೋಧನಾ ಪ್ರಕ್ರಿಯೆಯಲ್ಲಿ ಅಳವಡಿಸಿಕೊಳ್ಳುವ ಬಗ್ಗೆ.

ಉಲ್ಲೇಖ:- ಆಯುಕ್ತರ ಕಛೇರಿ, ಸಾರ್ವಜನಿಕ ಶಿಕ್ಷಣ ಇಲಾಖೆ, ರವರ ಸುತ್ತೋಲೆ ಪತ್ರ ಸಂಖ್ಯೆ: ಎಡಿಎಂ2(1) ಶೈ.ವ.ನಿ-01/2021-22 ದಿನಾಂಕ: 10.06.2021

*****************

ವಿಷಯ ಹಾಗೂ ಉಲ್ಲೇಖಗಳಿಗೆ ಸಂಬಂಧಿಸಿದಂತೆ, ಕೋವಿಡ್ 19 ಸಾಂಕ್ರಾಮಿಕ ಜಾಗತಿಕವಾಗಿ ಹರಡಿರುವ ಹಿನ್ನೆಲೆಯಲ್ಲಿ 2021-2022ನೇ ಶೈಕ್ಷಣಿಕ ಸಾಲಿನಲ್ಲಿ ಶಾಲೆಗಳು ಪ್ರಾರಂಭವಾಗುವುದು ತಡಗೊಳ್ಳುತ್ತಿದೆ. ಈ ಹಿನ್ನೆಲೆಯಲ್ಲಿ ಮಕ್ಕಳಿಗೆ ನಿರಂತರ ಕಲಿಕಾ ಅನುಭವಗಳನ್ನು ನೀಡಲು 1 ರಿಂದ 10ನೇ ತರಗತಿಗಳಿಗೆ ಎಲ್ಲಾ ವಿಷಯಗಳಿಗೆ ಸಂಬಂಧಿಸಿದ ಪಠ್ಯವಸ್ತುವಿನ ಅನ್ವಯ ಕಲಿಕಾ ಫಲಗಳಿಗೆ ಅನುಗುಣವಾಗಿ ಉಲ್ಲೇಖಿತ ಪತ್ರದ ವಾರ್ಷಿಕ ಮಾರ್ಗಸೂಚಿಯಲ್ಲಿ ಸೂಚಿಸಿದಂತೆ 2021-2022ನೇ ಸಾಲಿಗೆ ಜುಲೈ ಮಾಹೆಯಲ್ಲಿ ಸೇತುಬಂಧ ತರಗತಿಗಳನ್ನು ನಡೆಸಲು ಸೂಚಿಸಿದ್ದು, ಸೇತುಬಂಧ ಸಾಹಿತ್ಯವನ್ನು 1 ರಿಂದ 10ನೇ ತರಗತಿಗಳಿಗೆ ಎಲ್ಲಾ ವಿಷಯಗಳಲ್ಲಿ ಹಾಗೂ ಕನ್ನಡ, ಇಂಗ್ಲೀಷ್, ಉರ್ದು ಮತ್ತು ಮರಾಠಿ ಮಾಧ್ಯಮಗಳಲ್ಲಿ ಸಿದ್ಧಪಡಿಸಿ, ಡಿ.ಎಸ್.ಇ.ಆರ್.ಟಿ ವೆಬ್‌ಸೈಟ್‌ಗೆ ಅಪ್‌ಲೋಡ್ ಮಾಡಲಾಗಿತ್ತು. ಅದರಂತೆಯೇ, ಮುಂದಿನ ತಿಂಗಳುಗಳಲ್ಲಿಯೂ ಮಕ್ಕಳ ನಿರಂತರ ಕಲಿಕೆಯನ್ನು ಕಾಯ್ದುಕೊಳ್ಳುವ ಅವಶ್ಯಕತೆ ಇದೆ.

ಈ ಹಿನ್ನೆಲೆಯಲ್ಲಿ 1 ರಿಂದ 10ನೇ ತರಗತಿಗಳಿಗೆ ಆಗಸ್ಟ್-2021 ರಿಂದ ತರಗತಿಗಳು ಪ್ರಾರಂಭ ಮಾಡಬೇಕಾಗಿದ್ದು, ಈ ಸಂಬಂಧ ಇನ್ನೂ ಶಾಲೆ ಪ್ರಾರಂಭಗೊಳ್ಳದ ಹಿನ್ನೆಲೆಯಲ್ಲಿ ಮಕ್ಕಳ ಕಲಿಕೆಯಲ್ಲಿ ನಿರಂತರತೆ ಕಾಯ್ದುಕೊಳ್ಳುವ ನಿಟ್ಟಿನಲ್ಲಿ ಅಗತ್ಯವಾಗಿರುವ ಪರ್ಯಾಯ ಶೈಕ್ಷಣಿಕ ಯೋಜನೆಯನ್ನು ಈ ಕೆಳಕಂಡಂತೆ ತರಗತಿವಾರು, ವಿಷಯವಾರು ಹಾಗೂ ಮಾಧ್ಯಮವಾರು ಸಿದ್ಧಪಡಿಸಲಾಗಿದ್ದು, ಸದರಿ ಯೋಜನೆಯನ್ನು ಡಿ.ಎಸ್.ಇ.ಆರ್.ಟಿ. ವೆಬ್‌ಸೈಟ್ (www.dsert.kar.nic.in) ನಲ್ಲಿ ಅಪ್‌ಲೋಡ್ ಮಾಡಲಾಗಿದೆ.

| ಕ್ರ ಸಂ | ತರಗತಿ | ವಿಷಯ | ಮಾಧ್ಯಮ |
|---|---|---|---|
| 1 | 1 ರಿಂದ 3ನೇ ತರಗತಿ | ಈಗಾಗಲೇ ಅಪ್‌ಲೋಡ್ ಮಾಡಿರುವ 1 ರಿಂದ 3 ನೇ ತರಗತಿಗಳ ಕನ್ನಡ, ಇಂಗ್ಲಿಷ್, ಗಣಿತ ಮತ್ತು ಪರಿಸರ ಅಧ್ಯಯನ ವಿಷಯಗಳಲ್ಲಿ 60 ದಿನಗಳ ಸೇತುಬಂಧ ಸಾಹಿತ್ಯವನ್ನು ಆಗಸ್ಟ್ ತಿಂಗಳಿಗೂ ಉಪಯೋಗಿಸುವುದು. | ಕನ್ನಡ ಮತ್ತು ಉರ್ದು |
| 2 | 4 ಮತ್ತು 5ನೇ ತರಗತಿ | **ಪ್ರಥಮ ಭಾಷೆ:** ಕನ್ನಡ, ಉರ್ದು ಮತ್ತು ಮರಾಠಿ<br>**ದ್ವಿತೀಯ ಭಾಷೆ:** ಕನ್ನಡ, ಇಂಗ್ಲಿಷ್<br>**ಕೋರ್ ವಿಷಯಗಳು:** ಗಣಿತ, ಪರಿಸರ ಅಧ್ಯಯನ | ಕನ್ನಡ, ಇಂಗ್ಲಿಷ್, ಉರ್ದು ಮತ್ತು ಮರಾಠಿ |
| 3 | 6 ಮತ್ತು 7ನೇ ತರಗತಿ | **ಪ್ರಥಮ ಭಾಷೆ:** ಕನ್ನಡ, ಉರ್ದು ಮತ್ತು ಮರಾಠಿ<br>**ದ್ವಿತೀಯ ಭಾಷೆ:** ಕನ್ನಡ, ಇಂಗ್ಲಿಷ್<br>ತೃತೀಯ ಭಾಷೆ: ಹಿಂದಿ, ಸಂಸ್ಕೃತ<br>**ಕೋರ್ ವಿಷಯಗಳು:** ಗಣಿತ, ವಿಜ್ಞಾನ, ಸಮಾಜ ವಿಜ್ಞಾನ ಮತ್ತು ದೈಹಿಕ ಶಿಕ್ಷಣ | ಕನ್ನಡ, ಇಂಗ್ಲಿಷ್, ಉರ್ದು ಮತ್ತು ಮರಾಠಿ |
| 4 | 8 ರಿಂದ 10 ನೇ ತರಗತಿ | **ಪ್ರಥಮ ಭಾಷೆ:** ಕನ್ನಡ, ಸಂಸ್ಕೃತ, ಉರ್ದು ಮತ್ತು ಮರಾಠಿ<br>**ದ್ವಿತೀಯ ಭಾಷೆ:** ಕನ್ನಡ, ಇಂಗ್ಲಿಷ್<br>ತೃತೀಯ ಭಾಷೆ: ಹಿಂದಿ<br>**ಕೋರ್ ವಿಷಯಗಳು:** ಗಣಿತ, ವಿಜ್ಞಾನ, ಸಮಾಜ ವಿಜ್ಞಾನ ಮತ್ತು ದೈಹಿಕ ಶಿಕ್ಷಣ | ಕನ್ನಡ, ಇಂಗ್ಲಿಷ್, ಉರ್ದು ಮತ್ತು ಮರಾಠಿ |

ಶಿಕ್ಷಕರು ಈ ಸಾಹಿತ್ಯವನ್ನು ಬಳಸಿಕೊಂಡು ಮಕ್ಕಳಿಗೆ ನಿರಂತರ ಕಲಿಕಾ ಅನುಭವವನ್ನು ಒದಗಿಸುವುದು. ಸಾಹಿತ್ಯದಲ್ಲಿ ನೀಡಿರುವ ಚಟುವಟಿಕೆಯನ್ನೇ ಬಳಸಬಹುದು ಅಥವಾ ತಮ್ಮ ಹಂತದಲ್ಲಿ ಸ್ಥಳೀಯ ಸನ್ನಿವೇಶಕ್ಕೆ ಮತ್ತು ಅಪೇಕ್ಷಿತ ಕಲಿಕಾ ಫಲಗಳಿಗೆ ಅನುಗುಣವಾಗಿ ಚಟುವಟಿಕೆಯನ್ನು ರೂಪಿಸಿಕೊಂಡು ಅನುಷ್ಠಾನಿಸಲು ಅಗತ್ಯವಿರುವ ಎಲ್ಲಾ ಕ್ರಮಗಳನ್ನು ಕೈಗೊಳ್ಳಲು ತಿಳಿಸಿದೆ.

ಉಲ್ಲೇಖಿತ ಪತ್ರ ದಿನಾಂಕ:10.06.2021ರ ಸುತ್ತೋಲೆಯಲ್ಲಿನ ಪುಟ 8 ರಲ್ಲಿ ತಿಳಿಸಿರುವ ಪರ್ಯಾಯ ಶೈಕ್ಷಣಿಕ ಯೋಜನೆ 2021-2022ರ ಕಾರ್ಯತಂತ್ರದ ಅನುಷ್ಠಾನ ಉಸ್ತುವಾರಿ ಮತ್ತು ಪ್ರಗತಿ ಪರಿಶೀಲನೆ ಹಾಗೂ ಮಾರ್ಗದರ್ಶನದ ಅಂಶಗಳ ಅನ್ವಯ ಕ್ರಮವಹಿಸಲು ತಿಳಿಸಿದೆ.

(ವಿ. ಅನ್ಬುಕುಮಾರ್)
ಆಯುಕ್ತರು
ಸಾರ್ವಜನಿಕ ಶಿಕ್ಷಣ ಇಲಾಖೆ
ಬೆಂಗಳೂರು

ಗೆ,

1. ರಾಜ್ಯದ ಎಲ್ಲಾ ಉಪನಿರ್ದೇಶಕರು (ಆಡಳಿತ) ಹಾಗೂ ಉಪನಿರ್ದೇಶಕರು (ಅಭಿವೃದ್ಧಿ)ರವರಿಗೆ ಅಗತ್ಯ ಕ್ರಮಕ್ಕಾಗಿ.
2. ರಾಜ್ಯದ ಎಲ್ಲಾ ಕ್ಷೇತ್ರ ಶಿಕ್ಷಣಾಧಿಕಾರಿಗಳಿಗೆ ಹಾಗೂ ಕ್ಷೇತ್ರ ಸಮನ್ವಯಾಧಿಕಾರಿಗಳಿಗೆ ಉಪನಿರ್ದೇಶಕರು (ಆಡಳಿತ) ರವರ ಮೂಲಕ ಅಗತ್ಯ ಕ್ರಮಕ್ಕಾಗಿ.
3. ರಾಜ್ಯದ ಎಲ್ಲಾ ಶಾಲೆಗಳ ಮುಖ್ಯ ಶಿಕ್ಷಕರಿಗೆ ಕ್ಷೇತ್ರ ಶಿಕ್ಷಣಾಧಿಕಾರಿಗಳ ಮೂಲಕ ಅಗತ್ಯ ಕ್ರಮಕ್ಕಾಗಿ

ಪ್ರತಿಯನ್ನು:

1. ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು, ಕರ್ನಾಟಕ ಸರ್ಕಾರ ರವರ ಆಪ್ತ ಕಾರ್ಯದರ್ಶಿರವರಿಗೆ ಕಳುಹಿಸುತ್ತಾ, ಮಾನ್ಯ ಸಚಿವರ ಗಮನಕ್ಕೆ ತರಲು ಕೋರಿದೆ.
2. ಮಾನ್ಯ ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ರವರಿಗೆ ಗೌರವ ಪೂರ್ವಕವಾಗಿ ಅವಗಾಹನೆಗೆ ಸಲ್ಲಿಸಿದೆ.
3. ಮಾನ್ಯ ರಾಜ್ಯ ಯೋಜನಾ ನಿರ್ದೇಶಕರು, ಸಮಗ್ರ ಶಿಕ್ಷಣ ಕರ್ನಾಟಕ , ನೃಪತುಂಗ ರಸ್ತೆ, ಬೆಂಗಳೂರು ರವರಿಗೆ ಗೌರವ ಪೂರ್ವಕವಾಗಿ ಅವಗಾಹನೆಗೆ ಸಲ್ಲಿಸಿದೆ.
4. ಅಪರ ಆಯುಕ್ತರು, ಸಾ.ಶಿ.ಇಲಾಖೆ, ಧಾರವಾಡ ಆಯುಕ್ತಾಲಯ ಮತ್ತು ಕಲಬುರಗಿ ಆಯುಕ್ತಾಲಯ ರವರಿಗೆ ಅಗತ್ಯ ಕ್ರಮಕ್ಕಾಗಿ ಸಲ್ಲಿಸಿದೆ.
5. ರಾಜ್ಯದ ಎಲ್ಲಾ ನಿರ್ದೇಶಕರು, ಸಾರ್ವಜನಿಕ ಶಿಕ್ಷಣ ಇಲಾಖೆ ರವರಿಗೆ ಅನುಪಾಲನೆಗಾಗಿ.
6. ಕಛೇರಿ ಪ್ರತಿ.